ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 333/2021 .

ಫ್ರಾ.ಸಾ. : 1
ಚಾ.ಸಾ. : 2

| | | |
|---|---|---|
| ಹೆಸರು | : | ವಿ. ಆರ್. ತಾಯಮ್ಮ |
| ಗಂಡನ ಹೆಸರು | : | ವಿ. ವೈ. ರಮೇಶ್ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಕೋತೂರು |

... ............................................................................................................ ...

ದಿನಾಂಕ 01 ನೇ ಏಪ್ರಿಲ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಸ ಸ ಅ ರವರಿಂದ :-

ದಿ. 11.09.2020 ರಂದು ರಾತ್ರಿ 10 ಗಂಟೆಗೆ ಹರಿಹರ ಕೋತೂರು ಜಂಕ್ಷನ್ ನಲ್ಲಿ ಲಾರಿ ಬಂದು ಅಂಗಡಿ ಹಾಗೂ ವಿದ್ಯುತ್ ಕಂಬ, ಬಸ್ ತಂಗುದಾಣಕ್ಕೆ ಡಿಕ್ಕಿ ಪಡಿಸಿತು. ನಮ್ಮ ಮನೆ ಅಲ್ಲೇ ಪಕ್ಕದಲ್ಲಿ ಇದ್ದು ಶಬ್ದ ಕೇಳಿ ನಾನು ಹಾಗೂ ಚಾಸಾ 3 ನನ್ನ ಮಗ ಹಾಗೂ ಇತರೇಯವರು ಅಲ್ಲಿಗೆ ಬಂದೆವು. ಲಾರಿ ಪಲ್ಟಿ ಹೊಡೆದಿತ್ತು. ನಮ್ಮ ಅಂಗಡಿಯ ಸಿಮೆಂಟ್ ಗೋಡೆ ಜಖಂ ಆಗಿ ಅಂದಾಜು 30 ರಿಂದ 40 ಸಾವಿರ ನಷ್ಟ ಅಗಿರುತ್ತದೆ. ಬಸ್ ತಂಗುದಾಣ ಜಖಂ ಆಗಿ ಸರ್ಕಾರಕ್ಕೂ ನಷ್ಟ ಉಂಟಾಗಿರುತ್ತದೆ. ನಾನು ಹಾಗೂ ಚಾಸಾ 1 ಮರುದಿನ ಪೊ. ಠಾಣೆಗೆ ಹೋಗಿ ದೂರು ನೀಡಿದೆವು. 13 ಪೋಟೋಗಳನ್ನು ನಿ ಪಿ 1 ರಿಂದ 13 ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು :- ಆರೋಪಿ ಪರ ವಕೀಲರವರಿಂದ :-

ಲಾರಿ ಶಬ್ದ ಕೇಳಿದಾಗ ನಾನು ಆಗ ತಾನೇ ಮಲಗಿದ್ದೆ. ನಮ್ಮ ಮನೆ ಹಾಗೂ ಅಂಗಡಿ ಸುಮಾರು 100 ರಿಂದ 150 ಅಡಿ ದೂರ ಎನ್ನುತ್ತಾರೆ. ಶಬ್ದ ಬರುವ ಮೊದಲು ನಾವು ನೋಡಲಿಲ್ಲ. ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನಾನು ನೋಡಲಿಲ್ಲ. ಆರೋಪಿಯನ್ನು ನೋಡಿ ಆ ದಿನ ಇವರು ಸಹ ಸ್ಥಳದಲ್ಲಿ ನಿಂತಿದ್ದರು ಎನುತ್ತಾರೆ. ನಾವು ದೂರು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿದರು. ನಿ ಪಿ 1 ರಿಂದ 13 ರಲ್ಲಿ ಮನೆ, ಅಂಗಡಿ, ತಂಗುದಾಣ, ಕಾಣುತ್ತಿಲ್ಲ

ಎಂದರೆ ಸರಿ. ಲಾರಿ ಆಚೆ ಅಂಗಡಿ ಮನೆ, ತಂಗುದಾಣ ಇದೆ ಎನ್ನುತ್ತಾರೆ. ನಮ್ಮ ಅಂಗಡಿ ಜಖಂ ಆಗಿರುವ ಬಗ್ಗೆ ಫೋಟೋ ಕಾಣುತ್ತಿಲ್ಲ ಎಂದರೆ ಸರಿ. ಶಬ್ದ ಕೇಳಿ ನಾನು ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಅಜಾಗರೂಕತೆಯಿಂದ ಲಾರಿಯನ್ನು ಚಾಲನೆ ಮಾಡಿಲ್ಲ ಹಾಗೂ ಯಾವುದೇ ಕಟ್ಟಡ, ವಿದ್ಯುತ್ ಕಂಬಕ್ಕೆ ಜಖಂಗೊಳಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)